## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** **1) ಶ್ರೀ ಎಂ.ಕೆ.ರಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೊಗರಿಕಟ್ಟೆ ಗ್ರಾಮ ಪಂಚಾಯಿತಿ ಮತ್ತು 2) ಶ್ರೀ ಮಂಜುನಾಥ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೊಗರಿಕಟ್ಟೆ ಗ್ರಾಮ ಪಂಚಾಯಿತಿ, ಹಾಲಿ ಮೈದೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧದ ನಡವಳಿ ಕುರಿತು.**

**ಓದಲಾಗಿದೆ:** 1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ-2458/2014/ಡಿಆರ್ಇ-1, ದಿನಾಂಕ: 07-07-2017.

2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ-2458/2014/ಡಿಆರ್ಇ-1, ದಿನಾಂಕ: 22-06-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ: 22-06-2017 ರವರ ಪತ್ರದೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ 1) ಶ್ರೀ ಗೌಳಿ ಈರಣ್ಣ ಬಿನ್ ತಿಪ್ಪಣ್ಣ 2) ಶ್ರೀ ಕೆ. ಮಂಜುನಾಥ ಬಿನ್ ಲೇಟ್ ರಾಮಣ್ಣ 3) ಶ್ರೀ ಬಿ. ದುರುಗಪ್ಪ ಬಿನ್ ಲೇಟ್ ಹನುಮಂತಪ್ಪ 4) ಶ್ರೀ ಜೆ.ರಫೀಕ್ ಬಿನ್ ಲೇಟ್ ಇಮಾಮ್ ಸಾಬ್ 5) ಶ್ರೀ ಕೆ. ನಾಗರಾಜ್ ಬಿನ್ ಲೇಟ್ ಹನುಮಂತಪ್ಪ ಮತ್ತು 6) ಶ್ರೀ ಷಣ್ಮುಖಪ್ಪ ಬಿನ್ ಹನುಮಪ್ಪ, ಗೋವೇರಹಳ್ಳಿ ಗ್ರಾಮ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ (ಇನ್ನು ಮುಂದು ದೂರುದಾರರುಗಳು ಎಂದು ಕರೆಯಲ್ಪಡುತ್ತಾರೆ) ರವರು 1) ಶ್ರೀ ಎಂ.ಕೆ.ರಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ 2) ಶ್ರೀ ಎಸ್.ಎಂ.ವೀರೇಶ್, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ 3) ಶ್ರೀಮತಿ ಬಡಿಗೇರ ಪ್ರೇಮಕ್ಕ, ಹಿಂದಿನ ಪಂಚಾಯತ್ ಅಧಿಕಾರಿ 4) ಶ್ರೀ ಮಂಜುನಾಥ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೋಗರಿಕಟ್ಟೆ ಗ್ರಾಮ ಪಂಚಾಯಿತಿ, 5) ಶ್ರೀ ಜಿ.ರಮೇಶ್ ನಾಯ್ಕ, ಸಹಾಯಕ ಇಂಜಿನಿಯರ್, ತೊಗರಿಕಟ್ಟೆ ಗ್ರಾಮ ಪಂಚಾಯಿತಿ 6) ಶ್ರೀ ಎ ಮಂಜುನಾಥ, ಸಹಾಯಕ ಇಂಜಿನಿಯರ, ತೊಗರಿಕಟ್ಟೆ ಗ್ರಾಮ ಪಂಚಾಯಿತಿ ಮತ್ತು (7) ಶ್ರೀ ಯಲ್ಲಾಪುರ ಶಶಿಧರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ ವಿಭಾಗ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ (ಇನ್ನು ಮುಂದೆ ಎದುರುದಾರರುಗಳು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರು ತಮ್ಮ ದೂರಿನಲ್ಲಿ ತೊಗರಿಕಟ್ಟೆ ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಖಾತರಿ ಕೆಲಸ ಮಾಡಿರುವುದು ನ್ಯಾಯವಾಗಿಲ್ಲ. ಕಳಪೆ ಕಾಮಗಾರಿ ಅರ್ಧಂಬರ್ಧ ಮನೆ ಕೆಲಸ ಪೂರೈಸಿ ಬಿಲ್ಲು ಮಾಡಿರುತ್ತಾರೆ. ಮಡ್ಡಿ ಕೆಂಚಮ್ಮ ಕೋಂಬೀರಪ್ಪ ಗೋವೇರಹಳ್ಳಿ ಇವರಿಗೆ ಮನೆ ಮಂಜೂರಾಗಿದ್ದು, ಮನೆ ಕಟ್ಟಡ ಕಟ್ಟದಿದ್ದರೂ ಕೂಡ 2 ವರ್ಷಗಳ ಹಿಂದೆ ಮನೆ ಪೂರ್ಣಗೊಳಿಸಿದಂತೆ ದಾಖಲಿಸಿ, ಬಿಲ್ ಮಾಡಿ, ಹಣ ಪಡೆದುಕೊಂಡಿರುತ್ತಾರೆ. ಗೌಳಿಸರಿತಾ ಕೋಂ ಶಿವಕುಮಾರ್‌ರವರಿಗೆ ಮನೆ ಮಂಜೂರಾಗಿದ್ದು, ಮನೆ ಕಟ್ಟಿಲ್ಲ. ಆದರೆ ರೂ.40,000/- ಹಣ ಕ್ಲೇಂ ಮಾಡಿದ್ದು, ಆ ಹಣ ಸರಿತಾರವರಿಗೆ ಪಾವತಿಯಾಗಿಲ್ಲ. 2012-13 ರಲ್ಲಿ ಇಂದಿರಾ ಆವಾಸ್ ಯೋಜನೆಯಲ್ಲಿ ಕೆಂಚಮ್ಮ ಕೋಂ ನಿಂಗಪ್ಪನಿಗೆ ಮನೆ ಮಂಜೂರಾಗಿದ್ದು, ಅವರ ಹೆಸರು ಗ್ರಾಮದ ಮತದಾರರ ಪಟ್ಟಿಯಲ್ಲಿಲ್ಲ ಹಾಗೂ ಅವರು ಹೋಗಿ 12 ವರ್ಷವಾಗಿದೆ. ಇವರ ಹೆಸರಿನಲ್ಲಿ ಬಸವ ವಸತಿ ಯೋಜನೆಯಲ್ಲೂ 2013-14 ನೇ ಸಾಲಿನಲ್ಲೂ ಮನೆ ಮಂಜೂರು ಮಾಡಿರುತ್ತಾರೆ. 2010-11 ರಲ್ಲಿ ಎಂ. ದುರುಗಮ್ಮ ಕೋಂ ಹನುಮಂತಪ್ಪ ಇವರಿಗೆ ಇಂದಿರಾ

ಆವಾಸ್ ಯೋಜನೆಯಲ್ಲಿ ಮನೆ ಮಂಜೂರಾಗಿದ್ದು, ಅವರು ಮನೆ ಕಟ್ಟಿಸಿಕೊಂಡಿದ್ದು, ಕೇವಲ 2 ಕಂತುಗಳ ಹಣ ಪಾವತಿಸಿ, ಉಳಿಕೆ ಒಂದು ಕಂತಿನ ಹಣ ಕೇಳಿದರೆ ಇನ್ನೂ ಮಂಜೂರಾಗಿಲ್ಲ ಎಂದು ಹೇಳುತ್ತಿದ್ದಾರೆ. ಕುಡಿಯುವ ನೀರಿನ ಪೈಪ್‌ಲೈನ್ ಕೆಲಸ ಮುಗಿಸಿಲ್ಲ. ಪೈಪುಗಳ ಗುಣಮಟ್ಟ ಸರಿಯಿಲ್ಲ. ಎದುರುದಾರರಿಂದ ಅವ್ಯವಹಾರ ನಡೆದಿದೆ ಎಂಬ ಆಪಾದನೆ ಮಾಡಿ ದೂರು ಸಲ್ಲಿಸಿರುತ್ತಾರೆ.

ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು. ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಶ್ರೀಮತಿ ಮಡ್ಡಿ ಕೆಂಚಮ್ಮ ಇವರು 2010-11ನೇ ಸಾಲಿನ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಮಂಜೂರಾಗಿದ್ದ ಮನೆಯನ್ನು ಪೂರ್ಣವಾಗಿ ನಿರ್ಮಾಣ ಮಾಡದೇ ಇದ್ದರೂ ಸಹ ಶ್ರೀ.ಎಂ.ಕೆ.ರಮೇಶ್, ಪಿ.ಡಿ.ಓ ಇವರು ಸಹಾಯಧನ ಮಂಜೂರು ಮಾಡಿ ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಶ್ರೀಮತಿ ಗೌಳಿ ಇವರು 2010-11ನೇ ಸಾಲಿನ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಮಂಜೂರಾಗಿದ್ದ ಮನೆಯನ್ನು ಪೂರ್ಣವಾಗಿ ನಿರ್ಮಾಣ ಮಾಡದೇ ಇದ್ದರೂ ಸಹ ಶ್ರೀ.ಬಿ.ಮಂಜಪ್ಪ, ಪಿ.ಡಿ.ಓ ಇವರು ಸಹಾಯಧನ ಮಂಜೂರು ಮಾಡಿ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ ಮತ್ತು ಶ್ರೀಮತಿ ದುರುಗಮ್ಮ ಇವರು ಸಂಪೂರ್ಣ ಮಾಡಿದ್ದರೂ ಸಹ 2 ಕಂತು ಬಿಡುಗಡೆ ಮಾಡಿದ್ದು ಉಳಿದ ಮೊತ್ತದ ಬಗ್ಗೆ ಎಂ.ರಮೇಶ್, ಪಿ.ಡಿ.ಓ ರವರು ಸಮರ್ಪಕ ಮಾಹಿತಿಯನ್ನು ನೀಡಿರುವುದಿಲ್ಲವೆಂದು ವರದಿಯಲ್ಲಿ ತಿಳಿಸಿರುತ್ತಾರೆ.

ತನಿಖಾಧಿಕಾರಿಯ ವರದಿಯ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಮಡ್ಡಿ ಕೆಂಚಮ್ಮ ಗಂಡ ವೀರಪ್ಪ ಇವರಿಗೆ 2010-11ನೇ ಸಾಲಿನಲ್ಲಿ ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಮಂಜೂರಾಗಿದ್ದು, ಸದರಿ ಫಲಾನುಭವಿಯ ಪ್ರಗತಿಗನುಗುಣವಾಗಿ ರಾಜೀವ್ ಗಾಂಧಿ ವಸತಿ ನಿಗಮ ಬೆಂಗಳೂರು ಇವರಿಂದ ಫಲಾನುಭವಿಯ ಖಾತೆ ಸಂಖ್ಯೆಗೆ ಆನ್‌ಲೈನ್ ಮುಖಾಂತರ ಒಟ್ಟು ರೂ.49,500/- ಜಮೆಯಾಗಿದ್ದು, ಪೋಲೀಸ್ ಉಪಾಧೀಕ್ಷಕರು ಸ್ಥಳಕ್ಕೆ ಭೇಟಿ ನೀಡಿದಾಗ ಅಡಿಪಾಯ ಹಾಕಿರುವುದು ಮಾತ್ರ ಕಂಡುಬಂದಿದೆಯೆಂದು ವರದಿಯಲ್ಲಿ ತಿಳಿಸಿದ್ದು, ಇದರನ್ವಯ ಸಂಬಂಧಿಸಿದ ಫಲಾನುಭವಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕನುಗುಣವಾಗಿ ಮನೆಯನ್ನು ನಿರ್ಮಿಸಿಕೊಳ್ಳಲು ತಿಳಿಸಿದಾಗ, ಬಿಡುಗಡೆಯಾದ ಅನುದಾನಕ್ಕನುಗುಣವಾಗಿ ಮನೆ ನಿರ್ಮಾಣ ಮಾಡಿಕೊಂಡು ವಾಸವಾಗಿರುತ್ತಾರೆ. ಶ್ರೀಮತಿ ಸರಿತಾ ಎನ್ನುವವರು ಕಾರಣಾಂತರದಿಂದ ಮನೆ ಕಟ್ಟುವುದನ್ನು ಸ್ಥಗಿತಗೊಳಿಸಿದ್ದು, ಗೋಡೆ ಹಂತದ ಮನೆ ಕಟ್ಟಡ ಮಳೆಯಿಂದ ಹಾನಿಗೊಳಪಟ್ಟು ಕುಸಿದು ಬಿದ್ದಿರುತ್ತದೆ. ನಂತರದಲ್ಲಿ ಫಲಾನುಭವಿಯು ವಸತಿ ಯೋಜನೆಯ ನಿಯಮದಂತೆ ಅಡಿಪಾಯ, ಗೋಡೆ ಹಂತದ ಮನೆಯನ್ನು ಕಟ್ಟಿಕೊಂಡಿರುವ ಪ್ರಕಾರ 2 ಹಂತಗಳಲ್ಲಿ ಚೆಕ್ ನೀಡಲಾಗಿದೆ ವಿನಃ ಮನೆ ನಿರ್ಮಿಸಿಕೊಳ್ಳದೆ ಹಣವನ್ನು ನೀಡಿಲ್ಲ. ಫಲಾನುಭವಿಯ ಪರವಾಗಿ ಅವರ ಗಂಡ ಯಲ್ಲಪ್ಪರವರು ಸಹಿ ಮಾಡಿ ಚೆಕ್ ಪಡೆದುಕೊಂಡಿರುತ್ತಾರೆಂದು ಹೇಳಿರುತ್ತಾರೆ. ದುರುಗಮ್ಮ ಗಂಡ ಹನುಮಂತಪ್ಪ ಇವರಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಅಸಲಿ ದಾಖಲೆಗಳು ಲಭ್ಯವಿಲ್ಲದೆ ಇರುವುದರಿಂದ, ಹಣ ಬಿಡುಗಡೆ ಮಾಡುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿರುತ್ತಾರೆ.

2 ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಅವರು ತೊಗರಿಕಟ್ಟೆ ಗ್ರಾಮ ಪಂಚಾಯಿತಿಯಲ್ಲಿ ದಿ:22/11/12 ರಿಂದ 16/8/13 ರ ತನಕ ಕರ್ತವ್ಯ ನಿರ್ವಹಿಸಿದ್ದು, ದೂರಿನಲ್ಲಿ ಆಪಾದಿಸಿರುವ ವಸತಿ ಯೋಜನೆಯ ಸಹಾಯ ಧನ ಬಿಡುಗಡೆಯನ್ನು ಅವರ ಅವಧಿಯಲ್ಲಿ ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ.

3ನೇ ಎದುರದಾರರು ತನ್ನ ಆಕ್ಷೇಪಣೆಯಲ್ಲಿ ದಿ.19/9/13 ರಲ್ಲಿ ನಡೆದ ವಿಶೇಷ ಗ್ರಾಮ ಸಭೆಯಲ್ಲಿ ವಸತಿ ಯೋಜನೆಯ ಫಲಾನುಭವಿಗಳನ್ನು ಆಯ್ಕೆ ಮಾಡಲಾಯಿತು. ಶ್ರೀಮತಿ ಕೆಂಚಮ್ಮ ಎನ್ನುವವರಿಗೆ 2012-13 ರಲ್ಲಿ ಮನೆ ರದ್ದಾದ ಪ್ರಯುಕ್ತ 2013-14 ರ ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆ ಮಾಡಲಾಗಿದೆ.

ಅವರ ಪಡಿತರ ಚೀಟಿಯಲ್ಲಿ ಅವರು ಗೋವೇರಳ್ಳಿ ಗ್ರಾಮದ ವಾಸಿಗಳೆಂದು ಖಚಿತ ಪಡಿಸಿಕೋಂಡು ಸರ್ವ ಸದಸ್ಯರು ಒಪ್ಪಿದ ಮೇರೆಗೆ ಆಯ್ಕೆ ಮಾಡಲಾಗಿರುತ್ತದೆ. ಸರ್ಕಾರ ಹಣ ದುರುಪಯೋಗವಾಗಿರುವುದಿಲ್ಲವೆಂದು ಹೇಳಿರುತ್ತಾರೆ. 4 ನೇ ಎದುರುದಾರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

5ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಪೋಲೀಸ್ ಉಪಾಧೀಕ್ಷಕರು ಸ್ಥಳ ಪರಿಶೀಲಿಸಿ ಸಾರ್ವಜನಿಕರನ್ನು ವಿಚಾರಿಸಿ ಸಾರ್ವಜನಿಕರನ್ನು ವಿಚಾರಿಸಿ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಆಗಿದ್ದು, ಕಾಮಗಾರಿ ಉತ್ತಮ ಗುಣಮಟ್ಟದಿಂದ ಕೂಡಿರುತ್ತದೆಂದು ಪೋಲೀಸ್ ಉಪಾಧೀಕ್ಷಕರು, ದಾವಣಗೆರೆ ಇವರು ವರದಿಯಲ್ಲಿ ಸಲ್ಲಿಸಿರುತ್ತಾರೆ. ಆದ್ದರಿಂದ, ಕಾಮಗಾರಿ ಕಳಪೆಯಾಗಿಲ್ಲ ಮತ್ತು ಹಣ ದುರುಪಯೋಗವಾಗಿಲ್ಲವೆಂದು ಹೇಳಿರುತ್ತಾರೆ.

6ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ತೊಗರಿಕಟ್ಟೆ ಗ್ರಾಮ ಪಂಚಾಯಿತಿ, ಗೋವೇರಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿರುತ್ತಾರೆ. ಕಾಮಗಾರಿಯಲ್ಲಿ ಯಾವುದೇ ಲೋಪವಾಗಿರುವುದಿಲ್ಲ ಎಂದು ಹೇಳಿರುತ್ತಾರೆ

7ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರಿನಲ್ಲಿ ಹೇಳಿರುವ ಹಾಗೆ ಕುಡಿಯುವ ನೀರಿನ ಪೈಪ್‌ಲೈನ್ ಪೂರಾ ಕೆಲಸ ಮಾಡಿರುವುದಿಲ್ಲ. ಟ್ಯಾಂಕ್‌ವರೆಗೆ ಮಾತ್ರ ಪೈಪ್‌ಲೈನ್ ಹಾಕಿದೆ. ಉಳಿದ ಪೈಪ್‌ಲೈನ್ ಕಾಮಗಾರಿ ಮಾಡಿಲ್ಲವೆಂದು ಹೇಳಿರುತ್ತಾರೆ.

ತನಿಖಾಧಿಕಾಯ ವರದಿಯನ್ನು ಪರಿಶೀಲಿಸಿದಾಗ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಎಂ.ಕೆ.ರಮೇಶ್ ಮತ್ತು ಶ್ರೀ.ಜಿ.ಮಂಜಪ್ಪ ಇವರುಗಳು ಕರ್ತವ್ಯಲೋಪ ಮಾಡಿರುವುದು ಕಂಡುಬರುತ್ತದೆ. 1ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ತನಿಖಾಧಿಕಾರಿಯ ಪರಿಶೀಲನೆಯ ನಂತರದಲ್ಲಿ ಮನೆ ನಿರ್ಮಾಣ ಸಂಪೂರ್ಣಗೊಳಿಸಲಾಗಿದೆಯೆಂದು ತಿಳಿಸಿದ್ದು, ಆದರೆ ಮನೆಯನ್ನು ಸಂಪೂರ್ಣಗೊಳಿಸುವ ಮೊದಲೇ ಸಂಪೂರ್ಣ ಅನುದಾನವನ್ನು ಬಿಡುಗಡೆ ಮಾಡಿದ ಬಗ್ಗೆ 1ನೇ ಎದುರುದಾರರಾಗಲಿ ಅಥವಾ 4ನೇ ಎದುರುದಾರರಾಗಲಿ ಸಮಂಜಸವಾದ ವಿವರಣೆಯನ್ನು ನೀಡಿರುವುದಿಲ್ಲ. 1ನೇ ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಮನೆ ಕಾಮಗಾರಿ ಸಂಪೂರ್ಣವಾಗುವ ಮೊದಲೇ ಅನುದಾನ ಬಿಡುಗಡೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 4ನೇ ಎದುರುದಾರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸದೇ ಇರುವ ಕಾರಣ ವಿಚಾರಣಾ ವರದಿಯನ್ನು ಅಲ್ಲಗಳೆಯಲು ಕಾರಣಗಳಿಲ್ಲ. ತನಿಖಾಧೀಕಾರಿಯ ವರದಿಯನ್ನು ಅಲ್ಲಗಳೆಯಲು 1 ಮತ್ತು 4ನೇ ಎದುರುದಾರರು ಯಾವುದೇ ಸಾಕ್ಷಾಧಾರಗಳನ್ನು ಒದಗಿಸದೇ ಇಉವ ಕಾರಣ ಅವರುಗಳು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆ ಕಾರಣದಿಂದಾಗಿ 1 ಮತ್ತು 4ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, 1 ಮತ್ತು 4ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ 1 ಮತ್ತು 4ನೇ ಎದುರುದಾರರು ಸಾರ್ವಜನಿಕ /ಸರ್ಕಾರಿ ನೌಕರನಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii)ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 1 ಮತ್ತು 4ನೇ ಎದುರುದಾರರ ವಿರುದ್ದ ಶಿಸ್ತು ನಡವಳಿಕೆ ಹೂಡಲು

ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, 1 ಮತ್ತು 4ನೇ ಎದುರುದಾರರ ವಿರುದ್ದ ವಿಚಾರಣೆ ನಡೆಸಲು, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/581/ಗ್ರಾಪಂಕಾ/2017, ಬೆಂಗಳೂರು, ದಿನಾಂಕ:26-07-2017.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ 1) ಶ್ರೀ ಎಂ.ಕೆ. ರಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೋಗರಿಕಟ್ಟೆ ಗ್ರಾಮ ಪಂಚಾಯಿತಿ ಮತ್ತು 4) ಶ್ರೀ ಮಂಜುನಾಥ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತೋಗರಿಕಟ್ಟೆ ಗ್ರಾಮ ಪಂಚಾಯಿತಿ, ಹಾಲಿ ಮೈದೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ದಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ:</u>**

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 395 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಾವಣಗೆರೆ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹರಪನಹಳ್ಳಿ, ದಾವಣಗೆರೆ ಜಿಲ್ಲೆ.
6. ಶ್ರೀ ಎಂ.ಕೆ. ರಮೇಶ್, ಪಂಚಾಯತ್ ಅಭಿವೃದ್ದಿ ಅಧಿಕಾರಿ, ತೋಗರಿಕಟ್ಟೆ ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
7. ಶ್ರೀ ಮಂಜುನಾಥ, ಹಿಂದಿನ ಪಂಚಾಯತ್ ಅಭಿವೃದ್ದಿ ಅಧಿಕಾರಿ, ತೋಗರಿಕಟ್ಟೆ ಗ್ರಾಮ ಪಂಚಾಯಿತಿ, ಹಾಲಿ ಮೈದೂರು ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
8. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.